ಮಾಡುತ್ತಿರುವುದರಿಂದ ಕಾಲೇಜು ಮಂಜೂರಾತಿಯನ್ನು ಕ್ಯಾನ್ಸಲ್ ಮಾಡಬೇಕು ಲೆಟರ್ ಆಫ್ ಇಂಟೆಂಟ್ ಅನ್ನು ಸದನದ ಮುಂದಿಡಿ. ಜಾಗ ಮಂಜೂರಾಗಿರುವವರ ಹೆಸರಿಗೆ ಖಾತೆ ಆಗಿಲ್ಲ. ಯಾರಿಗೂ ಬೇಡದ ಕೆಲಸ ಮಾಡಿ ಶಾಂತ ವಾತಾವರಣಕ್ಕೆ ಬೆಂಕಿ ಹಚ್ಚಿದಂತಾಗುತ್ತದೆ. ಕೊಡಗು ಜಿಲ್ಲೆಯ ಜನ ಧರಣಿ ಕುಳಿತಿದ್ದಾರೆ. ದಯವಿಟ್ಟು ಈ ಕಾಲೇಜಿಗೆ ಮಂಜೂರಾತಿ ಕೊಡಬೇಡಿ ಎಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್. — ಮಾನ್ಯ ಅಧ್ಯಕ್ಷರೆ, ನನ್ನ ಹೇಳಿಕೆಯಲ್ಲಿ ಪೂರ್ಣವಾಗಿ ಸರ್ಕಾರ ಏನು ಮಾಡಿದೆ ಅಂತ ಹೇಳಿದ್ದೇನೆ. ಅವರಿಗೆ ಪ್ರಾರಂಭ ಮಾಡಿ ಎಂದು ಪರವಾನಗಿಯನ್ನು ಕೊಟ್ಟಿಲ್ಲ. ಅವರು ಆಲ್ ಇಂಡಿಯಾ ಟೆಕ್ನಿಕಲ್ ಕೌನ್ಸಿಲ್‌ನವರಿಂದ ಒಪ್ಪಿಗೆಯನ್ನು ತರಬೇಕು ಅಂತ ಹೇಳಿದ್ದೇವೆ. ನಂತರ ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ತೆಗೆದುಕೊಳ್ಳಬೇಕು ಅಂತಹೇಳಿದ್ದೇವೆ. ಇವೆರಡನ್ನೂ ತೆಗೆದುಕೊಳ್ಳದ ಹೊರತು, ಪ್ರಾರಂಭ ಮಾಡಬಾರದು ಅಂತ ಸೂಚನೆಯನ್ನು ಕೊಟ್ಟಿದ್ದೇವೆ. ಆದರೆ ಅವರು ಸ್ಥಳೀಯವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ತೆಗೆದುಕೊಳುತ್ತೇವೆ ಅಂತ ಅವರು ಏನಾದರೂ ಪ್ರಚಾರ ಮಾಡಿದ್ದರೆ. ಆದಕ್ಕೆ ಈ ಮನೆಗಳಲ್ಲಿ,ಹಾಗೂ ಸಾರ್ವಜನಿಕವಾಗಿ ಪ್ರಶಿಭಟನೆ ಆಗಿದ್ದರೂ ಸಹ ಅಲ್ಲಿಗೂ ನಾವು ಅಲ್ಲಿಗೆ ಸೇರುವುದಕ್ಕೆ ತಯಾರಾಗಿದ್ದೇವೆ ಅಂತ ಹೇಳುವುದಾದರೆ, ಅದು ಆ ವಿದ್ಯಾರ್ಥಿಗಳಿಗೆ ಹಾಗೂ ಆ ಸಂಸ್ಥೆಯವರಿಗೆ ಸೇರಿದ್ದೇ ಹೊರತು ಅದರ ಜವಾಬ್ದಾರಿ ಸರ್ಕಾರಕ್ಕಾಗಲೀ ಇಲಾಖೆಗಾಗಲಿ ಸೇರಿದ್ದಲ್ಲ. ಒಟ್ಟಿನಲ್ಲಿ ಎರಡು ತರಹದ ಅಭಿಪ್ರಾಯಗಳು ಬರುತ್ತಿವೆ. ಆ ಜಿಲ್ಲೆಯಲ್ಲಿ ಯಾವುದೇ ಇಂಜಿನೀಯರಿಂಗ್ ಕಾಲೇಜುಗಳಲ್ಲಿ, ಅನೇಕ ಜಿಲ್ಲೆಗಳವರು ಕಾಲೇಜುಗಳು ಬೇಕೆಂದು ಒತ್ತಾಯ ಮಾಡಿಕೊಂಡು ತೆಗೆದುಕೊಂಡಿದ್ದು ಉಂಟು. ಇದರಲ್ಲಿ ಸ್ಥಳೀಯವಾಗಿ ಯಾರದೇ ಆರ್ಜಿ ಇರಲಿಲ್ಲ, ಮಂಗಳೂರು ಜಿಲ್ಲೆಯಲ್ಲಿ ಇದರ ಬ್ರಾಂಚ್ ಇದೆ ಅವರ ಸ್ವಂತ ಊರಾಂ ಕೊಟ್ಟಾಯಂ ಇರಬಹುದು. ಅಲ್ಲಿ ಅವರದ್ದೂ ಒಂದು ಬ್ರಾಂಚ್ ಇದೆ. ಅವರು ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದಾಗ, ಮಾನ್ಯ ಸದಸ್ಯರು ಹೇಳಿದ ಹಾಗೆ ಆ ವಿಶ್ವವಿದ್ಯಾನಿಲಯದ ಸಮಿತಿಯವರು ರಿಜೆಕ್ಟ್ ಮಾಡಿದರು ಆದರೆ ಅದನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಅಪ್ರೂವ್ ಮಾಡಿದ್ದಾರೆ ವಿ. ಸಿ. ಯವರು ವೈಯಕ್ತಿಕವಾಗಿ ಮಾಡಿರುವುದಕ್ಕಾಗುವುದಿಲ್ಲ, ಸಿಂಡಿಕೇಟೇ ಅದಕ್ಕೆ ಒಪ್ಪಿಗೆ ಕೊಟ್ಟಿದೆ ಆದರೆ ಸರ್ಕಾರ ಅವರನ್ನು ಪ್ರಾರಂಭ ಮಾಡಿ ಅಂತ ಹೇಳಿಲ್ಲ, ಅದಕ್ಕೆ ಅವಕಾಶವನ್ನೂ ಮಾಡಿಕೊಟ್ಟಿಲ್ಲ. ಮೊದಲು ಆಲ್ ಇಂಡಿಯಾ ಟೆಕ್ನಿಕಲ್ ಕೌನ್ಸಿಲ್‌ನವರ ಪರವಾನಗಿಯನ್ನು ತೆಗೆದುಕೊಂಡು ಬನ್ನಿ ಆಮೇಲೆ ಕೇಳಿ, ಯೋಚನೆ ಮಾಡುತ್ತೇವೆ ಅಂತ ಹೇಳಿದ್ದೇವೆ. ಈ ಮಾಧ್ಯ ಸಾರ್ವಜನಿಕರ ಒತ್ತಡ ವಿರೋಧಗಳು ಇವೆಲ್ಲಾ ಇವೆ. ಈ ಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಎರೆಡೂ ಕಡೆ ಎಲ್ಲ ಪಕ್ಷದ ಸದಸ್ಯರು ಇದರ ಬಗ್ಗೆ ವಿರೋಧ ಅಭಿಪ್ರಾಯವನ್ನು ಸೂಚನೆ ಮಾಡಿದ್ದಾರೆ ಅಲ್ಲಿ ಕಾಲೇಜು ಆಗಬಾರದು ಅಂತ ಸೂಚಿಸಿದ್ದಾರೆ. ಸ್ಥಳೀಯವಾಗಿಯೂ ಇದರ ವಿರುದ್ಧ ಪ್ರತಿಭಟನೆಗಳು ಆಗುತ್ತಿವೆ ಎಂಬುದಾಗಿ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಸರ್ಕಾರ ಮಾತ್ರ ಇದುವರೆವಿಗೂ ಅ ರಿಗೆ ಪ್ರಾರಂಭ ಮಾಡಿ ಅಂತ ಯಾವುದೇ ಆದೇಶವನ್ನು ಕೊಟ್ಟಿಲ್ಲ. ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಡವರ ಬಗ್ಗೆ ಸರ್ಕಾರ ಸಂಗ್ರಿವಾಜ್ಞೆ ಹೊರಡಿಸುವಲ್ಲಿ ವಿಳಂಬ ಮಾಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ. — ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಬಡವರ ಬಗ್ಗೆ ಸರ್ಕಾರ ಸಂಗ್ರಿವಾಜ್ಞೆ ಹೊರಡಿಸುವಲ್ಲಿ ವಿಳಂಬ ಮಾಡಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನೆಮಂತ್ರಿ)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) — ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಸುಮಾರು ೪ ೫೨ ಲಕ್ಷ ಎಕರೆ ಸರ್ಕಾರಿ ಜಮೀನನ್ನು ರೈತರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು ಕಂಡು ಬಂದಿದೆ. ಸರ್ಕಾರ ಈ ರೀತಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪ್ರದೇಶವನ್ನು ಸಕ್ರಿಯಗೊಳಿಸಲು ತಾತ್ಕಾಲಿಕ ತೀರ್ಮಾನ ತೆಗೆದುಕೊಂಡು, ಕರ್ನಾಟಕ ಭೂ ಕಾಯಿದೆ ಕಲಂ ೯೪ ಕ್ಕೆ ತಿದ್ದುಪಡಿ ಹಾಗೂ ಹೊಸ ಕಲಂ ೯೪–ಎ ಯಾಯಿದೆಗೆ ಅಳವಡಿಸಲು

ಯೋಚಿಸಿದೆ. ವಿಧಾನ ಮಂಡಲದ ಜಂಟಿ ಸಲಹಾ ಸಮಿತಿಯು ವರದಿ ಮತ್ತು ಸಲಹೆಗಳ ಆಧಾರದ ಮೇಲೆ ಖಾಯಿದೆಯು ತಿದ್ದುಪಡಿ ಮಾಡಲಾಗುತ್ತಿದೆ.

ರೈತರಿಂದ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪ್ರದೇಶವನ್ನು ತ್ವರಿತವಾಗಿ ಸಕ್ರಿಯಗೊಳಿಸಬೇಕೆಂದು ಒತ್ತಾಯ ಬರುತ್ತಿದೆ. ೧–೭–೧೯೮೪ರಿಂದ ಹಿಂದೆ ಅನಧಿಕೃತ ಸಾಗುವಳಿ ಮಾಡುತ್ತಿದ್ದ ಪ್ರದೇಶವನ್ನು ಸಕ್ರಿಯಗೊಳಿಸಬೇಕಾದರೆ ಕಾನೂನಿನ ತಿದ್ದುಪಡಿ ಅವಶ್ಯಕ. ಆದ್ದರಿಂದ ಹಿಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆಯನ್ನು ವಿಧಾನಮಂಡಲದ ಅಂಗೀಕಾರಕ್ಕೆ ಮಂಡಿಸಲಾಗಿತ್ತು. ಆದರೆ, ಮಸೂದೆಯನ್ನು ಅನುಮೋದಿಸಲು ಕಾಲವಕಾಶ ಇರಲಿಲ್ಲ.

ಅನಧಿಕೃತ ಸಾಗುವಳಿ ಪ್ರದೇಶವನ್ನು ತ್ವರಿತವಾಗಿ ಸಕ್ರಿಯಗೊಳಿಸಬೇಕೆಂದು ಉದ್ದೇಶಿಸಿರುವುದರಿಂದ ವಿಧಾನ ಮಂಡಲದ ಅನುಮೋದನೆ ಪಡೆಯುಲು ಪಳಂಬವಾಗುತ್ತಿದ್ದುದರಿಂದ ಸುಗ್ರೀವ ಆಜ್ಞೆಯನ್ನು ಹೊರಡಿಸಲು ಸರ್ಕಾರ ತೀರ್ಮಾನಿಸಿತ್ತು. ಆದರೆ, ಪ್ರಸ್ತುತ ವಿಧಾನ ಮಂಡಲದ ಅಧಿವೇಶನ ಕರೆಯುವ ನಿರೀಕ್ಷೆ ಇದ್ದುದರಿಂದ ಸುಗ್ರೀವ ಆಜ್ಞೆಯನ್ನು ಹೊರಡಿಸಲಿಲ್ಲ. ಈ ವಿಷಯವು ಮಹತ್ವ ಪೂರ್ಣವಾದುದರಿಂದ ವಿಧಾನ ಮಂಡಲದ ಉಭಯ ಸದನಗಳಲ್ಲಿ ಚರ್ಚೆಯಾದ ನಂತರ ಅನುಮೋದನೆ ಪಡೆದು, ಖಾಯಿದೆಗೆ ತಿದ್ದುಪಡಿ ತರಲು ಉದ್ದೇಶಿಸಿದೆ.

ವಿಧಾನ ಮಂಡಲದ ಉಭಯ ಸದನಗಳಲ್ಲಿ ಹಿಂದಿನ ಅಧಿವೇಶನದ ಕಾಲದಲ್ಲಿ ಹಲವಾರು ಸದಸ್ಯರು ಕರಡು ಮಸೂದೆಯ ಮೇಲೆ ಅಭಿಪ್ರಾಯಗಳನ್ನು ಸೂಚಿಸಲು ಕಾಲಾವಕಾಶ ಬೇಕು ಮತ್ತು ಕಂದಾಯ ಸಚಿವರು ವಿರೋಧ ಪಕ್ಷದ ಮತ್ತು ಆಡಳಿತ ಪಕ್ಷದ ಸದಸ್ಯರುಗಳನ್ನು ಕರೆದು ಚರ್ಚಿಸಬೇಕೆಂದು ಸಲಹೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ ೬ನೇ ತಾರೀಖಿನಿಂದ ಅಕ್ಟೋಬರ್ ೧೩ನೇ ತಾರೀಖಿನವರೆಗೆ ಎಲ್ಲಾ ಪಕ್ಷದ ಕೆಲವು ಸದಸ್ಯರುಗಳನ್ನು ಕರೆದು ಚರ್ಚಿಸಲು ಮೂರು ಭಾರಿ ಸಭೆಗಳ ಸೂಚನೆ ನೀಡಲಾಗಿತ್ತು. ಆದರೆ ವಿಧಾನ ಪರಿಷತ್ತಿನಲ್ಲಿ ಪ್ರಸ್ತುತ ವಿಧಾನ ಸಭೆಯಲ್ಲಿ ಹಲವಾರು ಮುಖ್ಯವಾದ ವಿಷಯಗಳು ಚರ್ಚೆಗೆ ತೆಗೆದುಕೊಂಡಿದ್ದಾಗ ಈ ಸಭೆಗಳಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಲು ಆಗಲಿಲ್ಲ. ಎಲ್ಲಾ ಪಕ್ಷಗಳ ಕೆಲವು ಸದಸ್ಯರುಗಳ ಸಲಹೆ ಮೇಲೆ ಈ ಸಭೆಗಳನ್ನು ಕರೆಯಲಾಗಿತ್ತು. ಉದ್ದೇಶಿಸಿದ ಕರಡು ಮಸೂದೆಯ ಮೇಲೆ ಸಮಗ್ರವಾದ ಅಭಿಪ್ರಾಯ ಪಡೆಯುವುದೇ ಉದ್ದೇಶವಾಗಿತ್ತು. ವಿಧಾನ ಮಂಡಲದ ಅಧಿವೇಶನದ ಕಾರ್ಯಕಲಾಪಗಳಿಂದ ಸಮಯ ದೊರೆಯದೆ ಚರ್ಚೆ ಮಾಡಲು ಅವಕಾಶ ವಾಗಲಿಲ್ಲ.

ಮಸೂದೆಯ ಮೇಲೆ ಸಮಗ್ರವಾದ ಅಭಿಪ್ರಾಯ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಜೆ.ಹೆಚ್.ಪಟೇಲ್.

† ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಸರ್ಕಾರ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಸುಮಾರು ಮೂರುವರೆ ಲಕ್ಷ ಕುಟುಂಬಗಳು ೫೫,೩೭,೭೭೪ ಎಕರೆ ಜಮೀನಿನಲ್ಲಿ ಬಗರ್‌ಹುಕುಂ ಸಾಗು ಮಾಡುತ್ತಿದ್ದಾರೆ. ಹೋದ ಸಾರಿ ಬಜೆಟ್ ಸಮಯದಲ್ಲಿ ನಾವು ಸೇರಿದಾಗ ಕಂದಾಯ ಇಲಾಖೆ ಪತಿಯಿಂದ ಸರ್ಕಾರಿ ಬಂದಾ ಬಿಲ್ಲನ್ನು ತಂದು ಅದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡದೇ ಸುಗ್ರೀವಾಜ್ಞೆ ಹೊರಡಿಸಿದಾಗ ಎಲ್ಲಾ ಕಡೆ ದೊಡ್ಡ ಗಲಾಟೆ ಆಯಿತು. ಅದರಲ್ಲಿ ಕಾಫಿ ಪ್ಲಾಂಟರ್ಸ್‌ಗೆ ಸೇರಿದ ಜಮೀನುಗಳನ್ನು ಖಾಯಂ ಮಾಡುವುದು ಸೇರಿದೆ ಎಂದು ಕಂದಾಯ ಸಚಿವರಿಗೆ ಎಲ್ಲರೂ ಪ್ರತಿಭಟನೆ ಮಾಡಿದರು ಆ ಸಮಯದಲ್ಲಿ ಸುಗ್ರೀವಾಜ್ಞೆ ಕೇವಲ ನಿವೇಶನಕ್ಕೆ ಮಾತ್ರ ಸಂಬಂಧಪಟ್ಟಿದ್ದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಕಳೆದ ೭–೮ ದಿವಸಗಳಿಂದ ಪ್ರತಿನಿತ್ಯ ಮುಖ್ಯ ಮಂತ್ರಿಗಳು ಒಂದು ಒಮ್ಮತಕ್ಕೆ ಬಂದು ಈ ಬಿಲ್ ಪಾಸ್ ಮಾಡೋಣ ಎಂದು ಹೇಳುತ್ತಿದ್ದು ಇದಕ್ಕೆ ಸಂಬಂಧಪಟ್ಟ ಹಾಗೆ ಕರೆದ ಸಭೆಗೆ ನೋಟೀಸ್ ಬರುತ್ತಿತ್ತೆಯೇ ವಿನಃ ಆ ಬಗ್ಗೆ ಸಭೆ ಸೇರುವುದಕ್ಕೆ ಆಗಲಿಲ್ಲ. ಈಗ ಕಾನೂನು ತಿದ್ದುಪಡಿ ತರುವುದಕ್ಕೆ ಕಾಲಾವಕಾಶ ಸಮಯ ಬೇಕೆಂದು ಹೇಳಿದ್ದಾರೆ. ಆದರೆ ಇಲ್ಲಿ ಯಾವುದೇ ಒಬ್ಬ ಸದಸ್ಯರಿಗೂ ಕೂಡಾ ಕಾಫಿ ಪ್ಲಾಂಟರ್ಸ್‌ನ್ನು ಬಿಟ್ಟು ಉಳಿದ ಬಗರ್‌ಹುಕುಮ್ ಮಾಡಿದ ಕಡುಬಡವರು ಯಾರಿದ್ದಾರೆ

ಅವರಿಗೆ ಭೂಮಿ ಕೊಡುವುದರಲ್ಲಿ ಯಾರೂ ಸಹ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಇದಕ್ಕೋಸ್ಕರ ವಿಶೇಷ ಅಧಿವೇಶನ ಕೂಡಾ ಕರೆಯಬೇಕೆಂದು ಹೇಳಿದ್ದೇವೆ. ಉದ್ದೇಶಪೂರ್ವಕವಾಗಿ ಇದನ್ನು ಇಟ್ರಡ್ಯೂಸ್ ಮಾಡಿ ಪಾಸ್ ಮಾಡದ ರಾಜ್ಯದ ಮಾಜಿಯವರೆ ಲಕ್ಷ ಜನರಿಗೆ ಜಮೀನು ಮಂಜೂರು ಆಗಿದ್ದರೆ ಅವರು ಸಾಲಸೋಲ ತೆಗೆದುಕೊಂಡು ಗೌರವದಿಂದ ಜೀವನ ಮಾಡುವುದಕ್ಕೆ ಏನು ಸಹಾಯ ವಾಗುತ್ತಿತ್ತು ಅದನ್ನು ತಪ್ಪಿಸಿದ್ದಿರಿ. ಈಗಾಗಲೇ ಬಿಲ್ ಇಟ್ರಡ್ಯೂಸ್ ಮಾಡಿರುವುದರಿಂದ ಆ ಬಿಲ್‌ನಲ್ಲಿ ಕಾಫಿ ಪ್ಲಾಂಟರ್ಸ್ ಕೈಬಿಟ್ಟ ಕಡಿಬಿಡವರಿಗೆ ಜಮೀನನ್ನು ಖಾಯಂ ಮಾಡುವ ಬಗ್ಗೆ ತಿದ್ದುಪಡಿ ತಂದು ಇವತ್ತಿನ ಈ ಸದನದಲ್ಲಿ ಇಂಟ್ರಡ್ಯೂಸ್ ಮಾಡಿ ಪಾಸ್ ಮಾಡಿ ಈ ಸದನದಲ್ಲಿ ಮಂಜೂರಾತಿ ಪಡೆಯಬೇಕೆಂದು ಹೇಳುತ್ತೇನೆ.

ಶ್ರೀ ಕೃಷ್ಣ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಮಂಡಲದ ಶ್ರೀಗಳು ಎಲ್ಲಾ ಪಕ್ಷದ ಸದಸ್ಯರನ್ನು ಕರೆದು ವಿಚಾರ ಮಾಡಿ ಅದನ್ನು ಪಾಸ್ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದರು. ಆದರೆ ಯಾವ ಕಾರಣಕ್ಕೋಸ್ಕರ ಸದಸ್ಯರನ್ನು ಭೇಟಿಯಾಗುವುದಕ್ಕೆ ಆಗಿಲ್ಲ ಎಂದು ನಾನು ಆಗಲೇ ಹೇಳಿದ್ದೇನೆ. ಆದಷ್ಟು ಜಾಗ್ರತೆ ಎಲ್ಲಾ ಪಕ್ಷಗಳ ಸದಸ್ಯರನ್ನು ಕರೆದು ಚರ್ಚೆ ಮಾಡಿ ಆದಷ್ಟು ಜಾಗ್ರತೆ ಸರ್ಕಾರ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಂದು ನಾನು ಹೇಳುತ್ತೇನೆ.

೩) ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ನೀಲಗಿರಿ ಮರಗಳನ್ನು ಮಾರಾಟ ಮಾಡುವಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ನೀಲಗಿರಿ ಮರಗಳನ್ನು ಮಾರಾಟ ಮಾಡುವಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ವ್ಯವಸಾಯ ಹಾಗೂ ಅರಣ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯದ ಬಗ್ಗೆ ನಾನ ಈ ಕೆಳಕಂಡ ಹೇಳಿಕೆ ಕೊಡಬಯಸುತ್ತೇನೆ.

T'ere is no proposal whatsoever for the University of Agricultural Sciences, Bangalore to sell Eucalyptus trees to Harihar Polyfibres. Hence, the question of the University authorities misusing the powers vested in them to unauthorisedly sell the Eucalyptus trees to Harihar Polyfibres does not arise. Presumably. the Hon'ble members is seeking to draw the attention of the Minister for Agriculture and Forests to the matter relating to the disposal of Eucalyptus trees in favour of Mysore Paper Mills Ltd., Bhadravathi. The facts of the case are as follows :

(5) The scattered Eucalyputs tree growth existing on an area of about 700 acres at G.K.V.K. was fully matured and the same was decided to be disposed off to meet the essential development experditure. The approximate yield thet was expected was around 6000 to 7000 M. Tonnes. The Mysore Paper Mills Ltd., Bhadravathi, a Government of Karnataka undertaking approached the University to dispose off the Eucalyptus trees in their favour by offering Rs. 250 per M. Tonne. The University did not accept the offered